# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 86/ 2018

ಸಿಡಬ್ಲ್ಯೂಃ 2
ಪಿಡಬ್ಲ್ಯೂಃ3

**ದಿನಾಂಕಃ 08-08-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಸಿದ್ದಲಿಂಗಪ್ಪ

ತಂದೆಯ/ಗಂಡನ ಹೆಸರು - ಮರೆಪ್ಪ

ವಯಸ್ಸು -?32 ವರ್ಷ

ಉದ್ಯೋಗ - ಚಾಲಕ

ವಾಸಸ್ಥಳಃ - ಕಾಡಮಗೇರಾ ತಾಃ ಶಹಾಪೂರ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಹಲೆ ಘಟನೆ ಜಾಗೆ ಪಂಚನಾಮೆ ಇದ್ದು ಅದು ಈಗಾಗಲೇ ನಿಪಿ-2 ಎಂದು ಗುರುತಿಸ್ಪಟ್ಟಿದ್ದು, ಸಾಕ್ಷಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 6-7 ವರ್ಷಗಳ ಹಿಂದೆ ಚಾಸಾ1 ರವರ ಗಂಡನ ಮನೆಯಲ್ಲಿ ಪೂಲೀಸರು ಬಂದಿದ್ದು ಗಂಡ ಹೆಂಡತಿ ಜಗಳ ಕುರಿತು ಬೆಃ10 ರಿಂದ 11 ರವರೆಗೆ ಪಂಚನಾಮೆ ಮಾಡಿದರು. ಮದುವೆ ಪೊಟೋ ಹಾಜರುಪಡಿಸಿರುತ್ತಾರೆ . ಸಾಕ್ಷಿಯು ಎರಡು ಪೋಟೋ ನೋಡಿ ಗುರುತಿಸಿದ್ದು, ಅವುಗಳ ಪೈಕಿ ಒಂದು ಈಗಾಗಲೇ ನಿಪಿ- 3 ಎಂದು ಗುರುತಿಸ್ಪಲ್ಪಟ್ಟಿದ್ದು , ಇನ್ನೊಂದು ಪೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಆ ದಿನ ನನ್ನ ಜೊತೆ ಚಾಸಾಃ 3 ರವರು ಇದ್ದರು.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎಸ್ ಎನ್ ವಾಯ ವಕೀಲರಿಂದಃ

ನಾನು ಚಿಕ್ಕವನಿರೂವಗನಿಂದ ಶಹಾಪೂರನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ಕಾಡಮಗೇರಿ ಗ್ರಾಮದ ನನ್ನ ಮನೆಯ ನಂಬರ ನನಗೆ ಗೊತ್ತಿಲ್ಲ. ನನ್ನ ಸಹೋದರ ಹೊನ್ನಪ್ಪ

ಶಹಾಪುರದಲ್ಲಿ ವಾಸವಾಗಿದ್ದು , ಗ್ಯಾಸ ವಿತರಣೆ ಮಾಡುತ್ತಿದ್ದಾನೆ ಎಂದರೆ ಸರಿ. ನಾನು ನನ್ನ ಸ ದರಿ ಸಹೋದರ ಒಂದೆ ಕಡೆ ವಾಸವಾಗಿರುತ್ತೇವೆ ಎಂದರೆ ಸರಿ. ನಾನು ಶಾಹಾಪೂರಕ್ಕೆ ಹೋಗಿ 10 ವರ್ಷ ಆಗಿರುತ್ತದೆ.

ಚಾಸಾಃ1 ನನ್ನ ತಾಯಿ ಕಡೆಯಿಂದ ಸಂಬಂಧಿ ಇದ್ದು ನಾನು ಅವರಿಗೆ ಮಾವ ಆಗಬೇಕು. ಪಂಚನಾಮೆಗೆ ಪೊಲೀಸರು ಕರೆದಿರುತ್ತಾರೆ. ಪೊಲೀಸರು ಕರೆದಾಗ ಕೆಂಚಮ್ಮಆಯಿ ದೇವಸ್ಥಾನದಲ್ಲಿದ್ದೆ. ಆಗ ಅಲ್ಲಿ ನಾನು ಮತ್ತು ಚಾಸಾಃ3 ಮಾತ್ರ ಇದ್ದೇವು. ನಾನು ಮತ್ತು ನನ್ನ ಸಹೋದರರು ಬೇರೆ ಬೇರೆ ವಾಸವಾಗಿದ್ದೇವೆ. ಕಾಡಮಗೇರಾದ ಮನೆ ಕೆಡವಿರುತ್ತೇವೆ. ಕೆಲಸ ಇದ್ದಾಗ ಮಾತ್ರ ಊರಿಗೆ ಬರುತ್ತೇನೆ ಎಂದರೆ ಸರಿಯಲ್ಲ ನಮ್ಮ ಜಮಿನು ಸರ್ವೆ ನಂ.108 ಇರುತ್ತದೆ.

ನಾನು ಪೊಲೀಸರು ಕರೆದ ಜಾಗೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ಕರೆದಾಗ 12 ಗಂಟೆ 20 ನಿಮಿಷ ಆಗಿತ್ತು. ಮನೆಗೆ ಬಂದಾಗ 12-30 ಗಂಟೆ ಆಗಿತ್ತು ಎಂದರೆ ಸಾಕ್ಷಿಯು 2 ರಿಂದ 5 ನಿಮಿಷ ಆಗಿತ್ತು ಎಂದು ನುಡಿದಿರುತ್ತಾರೆ.

ಮಲ್ಲಿಕಾರ್ಜುನ ಮತ್ತು ಸಿದ್ದಲಿಂಗಪ್ಪ ಬೇರೆ ಬೇರೆ ಆಗಿ ವಾಸವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಮದುವೆಯಾದ ತಿಂಗಳನಲ್ಲಿ ಚಾಸಾಃ 1 ಮತ್ತು 1 ನೇ ಆರೋಪಿ ಬೇರೆ ಆಗಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಪೋಲಸರ ಜೊತೆ ನಾನು ಮಲ್ಲಿಕಾರ್ಜುನನ ಮನೆಗೆ ಹೋಗಿರುತ್ತೇನೆ. ಮಲ್ಲಿಕಾರ್ಜುನ ಮನೆ ಸಿದ್ದಲಿಂಗಪ್ಪನ ಮನೆಯಿಂದ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ಎಷ್ಟು ಬಾಗಿಲುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ನಂಬರ ನನಗೆ ಗೊತ್ತಿಲ್ಲ. ನಾನು ಸಮ್ಮನೆ ಸಹಿ ಮಾಡಿ ಬಂದಿರುತ್ತೇನೆ. ನಿಪಿ-1 ರಲ್ಲಿನ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಹೇಳಿದಂತೆ ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ, ಪಂಚನಾಮೆ ಮಾಡಿರುದಿಲ್ಲ ಎಂದರೆ ಸರಿಯಲ್ಲ. ನಾನು ಮಹಿಳಾ ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಶಹಾಪುರನಲ್ಲಿ ಖಾಯಂ ಆಗಿ ವಾಸವಾಗಿದ್ದರೂ ಸಹ

ಕಾಡಮಗೇರಾ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆ , ಮಲ್ಲಿಕಾರ್ಜುನನ ಮನೆಯಿಂದ 400 ಮೀಟರ ಅಂತರದಲ್ಲಿ ಇರುತ್ತದೆ.

ಚಾಸಾಃ3 ರವರ ಪಂಚರ ಶಾಪ್ ಕಾಡಮಗೇರಾ ಗ್ರಾಮದಿಂದ 300 ಮೀಟರ ಅಂತರದಲ್ಲಿರುತ್ತದೆ. ನಮ್ಮ ಮತ್ತು ಚಾಸಾಃ3 ರವರ ಮನೆಯ ನಡುವೆ 30-40 ಮನೆಗಳು ಇರುತ್ತವೆ ಎಂದರೆ ಸರಿ. ನಾನಾಗಲಿ, ಚಾಸಾಃ3 ರವರಾಗಲಿ ಸ್ಥಳಕ್ಕೆ ಹೋಗಿರುವುದಿಲ್ಲ, ಪೊಲೀಸರು ಪಂಚನಾಮೆ ಮಾಡಿರುವುದಿಲ್ಲ ಎದರೆ ಸರಿಯಲ್ಲ. ಚಾಸಾಃ1 ರವರು ನಮ್ಮ ಸಂಬಂಧಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.